**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ**

**ಸಿ.ಸಿ. 645/2012**

**ಫಿರ್ಯಾದಿ :** ಸರ್ಕಾರದ ಪರವಾಗಿ ವಲಯ ಅರಣ್ಯ ಇಲಾಖೆ,
ಕನಕಪುರ ವಲಯ ಪೊಲೀಸ್ ಠಾಣೆ, ರಾಮನಗರ ವಿಭಾಗ.

**ವಿರುದ್ದ**

**ಆರೋಪಿತರು :**

1) ಎಂ. ಎನ್ ಮಂಜುನಾಥ್
ಬಿನ್ ನಾರಾಯಣಗೌಡ,
ವಾಸಃ ನಂ. 58, 25 ನೇ ಕ್ರಾಸ್,
6 ನೇ ಬ್ಲಾಕ್, ಜಯನಗರ,
ಬೆಂಗಳೂರು.

2) ವೆಂಕಟೇಶ್
ಬಿನ್ ಗಿರಿಗೌಡ,
ವಾಸಃ ಕಾಲೋನಿ ರಸ್ತೆ,
ಕನಕಪುರ ಟೌನ್.

**ದಂಡ ಪ್ರಕ್ರಿಯ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ವಿಚಾರಣೆ**

ಪ್ರಶ್ನೆ: 1: ನೀವು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆ: 2: ಪ್ರಾಸಾ-1 ಮಾದಪ್ಪ ರವರು, ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22.02.2011 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ನಾರಾಯಣಪುರದ ಬೆಟ್ಟಳ್ಳಿ ವಾಡೆಯ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದಾಗ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾಗ ಅರಣ್ಯ ಪ್ರದೇಶದ ಒಳಗಡೆ ಹಿಟಾಕಿ ವಾಹನವು ನಿಂತಿತ್ತು. ಆರೋಪಿಯು ಕಗ್ಗಲಿ, ಚುಜ್ಜಲಿ, ತೆಪ್ಪಾಲೆ, ಉರುಗಲ ಮರಗಳನ್ನು ಬುಡ ಸಮೇತ ತೆಗೆದು ಕೆಳಕ್ಕೆ ಉರುಳಿಸಿರುತ್ತಾರೆ. ಮಹಜರ್ ಕ್ರಮ ಜರುಗಿಸಿ FIR ಅನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ :3: ಪ್ರಾಸಾ-2 ಶಿವರಾಜು ರವರು, ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22.02.2011 ರಂದು ಚಾಸಾ-1 ರವರ ಜೊತೆ ಗಸ್ತುಗೆ ಹೋಗಿದ್ದ ಸಮಯದಲ್ಲಿ ಬೆಟ್ಟಳ್ಳಿ ವಾಡೆಯ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದಾಗ ಕ್ವಾರೆ ಪಕ್ಕದಲ್ಲಿ ರಸ್ತೆ ಮಾಡಲು ಆಲೆ, ಜುಜ್ಜಲಿ, ಬೆಪ್ಪಾಲೆ, ಉರುಗಲ ಮರಗಳನ್ನು ಬುಡ ಸಮೇತ ಹಿಟಾಚಿ ವಾಹನದಿಂದ ತೆಗೆದು ಕೆಳಕ್ಕೆ ಉರುಳಿಸಿರುತ್ತಾರೆ. ಅರಣ್ಯ ಪ್ರದೇಶದ ಸರ್ವೆ ನಂ. 67 ಕ್ಕೆ ಸಂಬಂಧಿಸಿದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ : 4: ಪ್ರಾಸಾ-3 ನರಸೇಗೌಡ ರವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 10 ವರ್ಷಗಳ ಹಿಂದೆ ಬೆಟ್ಟಳ್ಳಿ ವಾಡೆಯಲ್ಲಿ ಸರ್ವೆ ನಂ. 67 ರಲ್ಲಿ ಕೋರೆಯವರು ಚುಜ್ಜಲಿ ಮರ, ಬೆಪ್ಪಾಲೆ ಮರವನ್ನು ಕಡಿದು ಹಾಕಿರುತ್ತಾರೆ. ನಂತರ ನಾವು RFO ಗೆ ಮಾಹಿತಿಯನ್ನು ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ : 5: ಪ್ರಾಸಾ-4 ಜಗನ್ನಾಥ್ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-6 ರವರಿಂದ ಪ್ರಕರಣದ ಕಡತವನ್ನು ಪಡೆದು ಉಪ ಅರಣ್ಯಾಧಿಕಾರಿಗಳು ಮೋಜಿಣಿ ಕೇಳಿದ್ದರ ಮೇರೆಗೆ ತಾನು ಸಹಾಯಕ ಸಂರಕ್ಷಣಾಧಿಕಾರಿ, ಕನಕಪುರ ವಲಯ ಅವರ ಅನುಮತಿ ಪಡೆದು ಮೋಜಿಣಿ ನಕಾಶೆಯನ್ನು 19.05.2012 ರಂದು ನಕಾಶೆಯನ್ನು ಮೋಜಿಣಿದಾರರಾದ ಈರೇಗೌಡರಿಂದ ಪಡೆದು ಅರಣ್ಯ ಪ್ರದೇಶದಲ್ಲಿ ಮತ್ತು ಸರ್ಕಾರಿ ಪ್ರದೇಶದಲ್ಲಿ ಅಪರಾಧ ಆಗಿರುವುದರಿಂದ ಖಚಿತಪಡಿಸಿಕೊಂಡು ಕಛೇರಿಯಲ್ಲಿದ್ದ ಎಲ್ಲಾ ದಾಖಲೆಗಳನ್ನು ಕ್ರೋಢೀಕರಿಸಿ ದಿನಾಂಕ 25.02.2012 ರಂದು ವಿಚಾರಣಾ ವರದಿಯನ್ನು ನಮೂನೆ 23 ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗ ಅವರಿಗೆ ಸಲ್ಲಿಸಿ ಸದರಿಯವರಿಂದ ನಮೂನೆ 24 ಅನ್ನು ದಿನಾಂಕ 26.05.2012 ರಂದು ಪಡೆದು ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ 29.05.2012 ರಂದು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ : 6: ಪ್ರಾಸಾ-5 ವಿಜಯಕುಮಾರ್ ಜಿ.ಆರ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22-02-2011 ರಂದು ತಾನು ಮತ್ತು ತನ್ನ ಸಿಬ್ಬಂದಿಯವರು ಗಸ್ತು ಮಾಡುತ್ತಿರುವ ಸಮಯದಲ್ಲಿ ಬೆಟ್ಟಹಳ್ಳಿಯ ಎ ಬಿ ಸಿ ರಕ್ಷಿತ ಅರಣ್ಯದ ಪ್ರದೇಶದಲ್ಲಿ ಸರ್ವೆ.ನಂ. 67 ರಲ್ಲಿ ಒಂದು ಟಾಟಾ ಹಿಟಾಚಿ 300 ಕೇಸರಿ ಬಣ್ಣದ ವಾಹನ ನಿಂತಿತ್ತು. ನಂತರ ತಾವು ತಮ್ಮ ಸಿಬ್ಬಂದಿಯವರಾದ ಚಾ.ಸಾ 2 ರಿಂದ 4 ರವರು ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ , ಅಲ್ಲೇ ಇದ್ದ ಆರೋಪಿ 2 ರವರನ್ನು ವಿಚಾರಿಸಿದಾಗ ಕಲ್ಲುಗಣಿ ಕೆಲಸ ಮಾಡಲು ಸದರಿ ಸ್ಥಳದಲ್ಲಿ ಟಾಟಾ ವಾಹನ ತಂದಿರುವುದಾಗಿ ಹೇಳಿರುತ್ತಾರೆ. ಈ ರೀತಿ ವಾಹನವನ್ನು ತರುವಾಗ ಅವರು ಅರಣ್ಯ ಸಂಪತ್ತಾದ ಜುಜ್ಜಲಿ, ಬೆಪ್ಪಾಲೆ, ಮಶುವಾಳ ಎಂಬ 9 ಮರಗಳನ್ನು ನಾಶಪಡಿಸಿರುವುದು ಕಂಡು ಬಂದಿರುತ್ತದೆ ಹಾಗೂ ಗೋಮಾಳದ ಭೂಮಿಯನ್ನು ಮಟ್ಟ ಮಾಡಿರುವುದು ಕಂಡು ಬಂದಿರುತ್ತದೆ. ಆರೋಪಿತರು ಮಾಡಿರುವ ಕೃತ್ಯ ಅರಣ್ಯ ಸಂಪತ್ತನ್ನು ನಾಶ ಮಾಡಿರುವುದು ಹಾಗೂ ಅರಣ್ಯದ ಒಳಗಡೆ ಅತಿಕ್ರಮ ಪ್ರವೇಶಿಸುವುದು ಕಂಡು ಬಂದಿರುತ್ತದೆ. ಈ ಘಟನೆ ಸಂಬಂಧ ಪಂಚನಾಮೆ ಮಾಡುವ ಸಲುವಾಗಿ ಅಲ್ಲಿ ಸ್ಥಳೀಯರು ಯಾರೂ ಕಾಣದೇ ಇರುವ ಕಾರಣ ಇಲಾಖೆ ಸಿಬ್ಬಂದಿಯರನ್ನೇ ಪಂಚರನ್ನಾಗಿ ಮಾಡಿಕೊಂಡು ಪಂಚನಾಮೆಯನ್ನು ಬೆಳಗ್ಗೆ 10.30 ಗಂಟೆಯಿಂದ 12 ಗಂಟೆಯವರೆಗೆ ಮಾಡಿರುತ್ತೇನೆ. ಪಂಚನಾಮೆ ಆಗುವ ಸಮಯದಲ್ಲಿ ವಾಹನವನ್ನು ವಶಪಡಿಸಿಕೊಂಡು, ಅಲ್ಲಿ ಬಿದ್ದಂತಹ ಮರವನ್ನು ಸಹ ಪಂಚನಾಮೆಯಲ್ಲಿ ನಮೂದು ಮಾಡಿ, ವಶಪಡಿಸಿಕೊಂಡಂತಹ ವಸ್ತುಗಳನ್ನು ಚಾ.ಸಾ.3 ರವರಿಗೆ ನೀಡಿ ಅದನ್ನು ಸಹ ಪಂಚನಾಮೆಯಲ್ಲಿ ನಮೂದಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ :7: ಪ್ರಾಸಾ-6 ಗೀತಾಂಜಲಿ ರವರು ತಮ್ಮ ಸಾಕ್ಷ್ಯದಲ್ಲಿ, ಸರ್ವೆ ನಂ. 67 ರಲ್ಲಿ ಕೆಬ್ಬಳ್ಳಿ ಗ್ರಾಮದಲ್ಲಿ RFO ರವರು 2010 ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಆರೋಪಿಗಳು ಅರಣ್ಯ ಪ್ರದೇಶ ವಲಯದಲ್ಲಿ ಅತಿಕ್ರಮ ಪ್ರವೇಶ ಮಾಡಿ ಕಟಾವು ಕೆಲಸ ಮಾಡಿ ಜೆಸಿಬಿ ಮೂಲಕ ಮಣ್ಣನ್ನು ಅಗೆಯುತ್ತಿರುತ್ತಾರೆ. ಮಣ್ಣನ್ನು ಸಮತಟ್ಟು ಮಾಡಿರುತ್ತಾರೆ. ಆ ಸಂಬಂಧ RFO ಪ್ರಕರಣ ದಾಖಲಿಸಿರುತ್ತಾರೆ. ಈ ಸಂಬಂಧ RFO ಸದರಿ ವಿಷಯವನ್ನು ತನ್ನ ಗಮನಕ್ಕೆ ತಂದಿರುತ್ತಾರೆ. ತಾನು ಮೇಲಾಧಿಕಾರಿಯಾಗಿ ಪ್ರಕರಣವನ್ನು ಮುಂದುವರೆಸುವಂತೆ ಆದೇಶ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ : 8: ಪ್ರಾಸಾ-7 ತಕತ್ ಸಿಂಗ್ ರಾಣವತ್ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-7 ರವರು RFO ಕನಕಪುರದಲ್ಲಿ ಕೆಲಸ ಮಾಡುತ್ತಿದ್ದು, FOC 42/2011-12 ಸಂಬಂಧ ವರದಿಯನ್ನು ತನ್ನ ಮುಂದೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ತಾನು ಪರಿಶೀಲನೆ ಮಾಡಿ ತಾನು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ:9: ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರೆಯೇ ಮತ್ತು ಯಾವುದಾದರೂ ದಾಖಲೆಗಳಿವೆಯೇ?

ಉತ್ತರಃ

ಪ್ರಶ್ನೆ: 10: ಈ ಪ್ರಕರಣದ ಬಗ್ಗೆ ಬೇರೇನಾದರೂ ಹೇಳುವುದಿದೆಯೇ?

ಉತ್ತರಃ

ಈ ಮೇಲೆ ಹೇಳಿದ ಪ್ರಶ್ನೆಗಳಿಗೆ ಆರೋಪಿತರಿಗೆ ಯಾವುದೇ ಒತ್ತಡಕ್ಕೆ ಮಣಿಯದೆ ತನ್ನ ಸ್ವ ಇಚ್ಛೆಯಿಂದ ನೀಡಿದ ಉತ್ತರಗಳನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ.

ಸಹಿ/-

ದಿನಾಂಕಃ 16-04-2026

**2ನೇ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕನಕಪುರ**